**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೧೬.೦೮.೨೦೧೭ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೨೧ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ ೨೧ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಆಗಸ್ಟ್ ೧೬, ೨೦೧೭ರ ಬುಧವಾರ ಬೆಳಿಗ್ಗೆ ೧೧.೦೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಬಿ.ಎನ್. ಹೊಸೂರ,** ಸವದತ್ತಿ | ಸದಸ್ಯರು |
| ೩. | **ಡಾ. ಎಂ.ಎ. ಶೃತಿಕೀರ್ತಿ,** ಮತ್ತೂರು | ಸದಸ್ಯರು |
| ೪. | **ಶ್ರೀ ಡಿ.ಪಿ. ಅನಂತ,** ಬೆಂಗಳೂರು | ಸದಸ್ಯರು |
| ೫. | **ರಾಜಗುರು ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ,** ಕವಲೇದುರ್ಗ | ಸದಸ್ಯರು |
| ೬. | **ಡಾ. ಎನ್.ಕೆ. ರಾಮಶೇಷನ್,** ಮೈಸೂರು | ಸದಸ್ಯರು |
| ೭. | **ವಿದ್ವಾನ್ ರಾಮಚಂದ್ರ ನಾ. ಭಟ್ಟ,** ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೮. | **ವಿದ್ವಾನ್ ನರಸಿಂಹ ಭಟ್ಟ,** ಪ್ರಾಚಾರ್ಯರು, ಸೋಂದಾ | ಸದಸ್ಯರು |
| ೯. | **ವಿದ್ವಾನ್ ಪದ್ಯಾಣ ಗೋವಿಂದ ಭಟ್,** ಪ್ರಾಚಾರ್ಯರು, ಹೊನ್ನಾವರ | ಸದಸ್ಯರು |
| ೧೦. | **ಡಾ. ಎಸ್.ಎನ್. ಸಂಪತ್ಕುಮಾರ್,** ಪ್ರಾಚಾರ್ಯರು(ಪ್ರ), ಬೆಂಗಳೂರು | ಸದಸ್ಯರು |
| ೧೧. | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ | ಸದಸ್ಯರು |
| ೧೨. | **ಶ್ರೀಮತಿ ಎಂ. ಶಿಲ್ಪ,** ಕ.ಆ.ಸೇ., ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ,** ಚಿತ್ರದುರ್ಗ | ಸದಸ್ಯರು |
| ೭. | **ಶ್ರೀ ಯೋಗೇಶಬಾಬು,** ಬಿ.ಜಿ. ಕೆರೆ, ಮೊಳಕಾಲ್ಮೂರು ತಾ. | ಸದಸ್ಯರು |
| ೮. | **ಡಾ. ಎಸ್. ವೇಣುಗೋಪಾಲ್,** ಮೈಸೂರು | ಸದಸ್ಯರು |
| ೯. | **ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ,** ಪ್ರಾಚಾರ್ಯರು, ಧಾರವಾಡ | ಸದಸ್ಯರು |
| ೧೩. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರನಿಕಾಯ | ಸದಸ್ಯರು |
| ೧೦. | **ಡಾ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ, ಟಿಪ್ಪಣಿ ಮತ್ತು ನಿರ್ಣಯ | |
|---|---|---|
| ವಿಷಯ 01 | **ವಿಷಯ ಮತ್ತು ಟಿಪ್ಪಣಿ** | **ವಿಶ್ವವಿದ್ಯಾಲಯದ ಸಂಸ್ಕೃತ ಬಿ.ಎ. ಹಾಗೂ ಸಂಸ್ಕೃತ ಎಂ.ಎ. ತರಗತಿಗಳ ಪರಿಷ್ಕೃತ ಪಾಠ್ಯಕ್ರಮವನ್ನು ಅನುಮೋದಿಸುವ ಬಗೆಗೆ.**<br>ದಿನಾಂಕ: 19.06.2017ರಂದು ವಿಶ್ವವಿದ್ಯಾಲಯದ ಸಂಸ್ಕೃತ ಬಿ.ಎ. ಹಾಗೂ ಸಂಸ್ಕೃತ ಎಂ.ಎ. ತರಗತಿಗಳ ಅಧ್ಯಯನ ಮಂಡಳಿಗಳ ಸಭೆಯು ನಡೆಯಿತು. ಅಂದು ಸಂಸ್ಕೃತ ಬಿ.ಎ. ಹಾಗೂ ಸಂಸ್ಕೃತ ಎಂ.ಎ. ತರಗತಿಗಳ ಪಾಠ್ಯಕ್ರಮದಲ್ಲಿ ಪರಿಷ್ಕರಣೆಯನ್ನು ಮಾಡಲಾಯಿತು. ಪರಿಷ್ಕೃತ ಪಾಠ್ಯಕ್ರಮವನ್ನು ಲಗತ್ತಿಸಲಾಗಿದೆ. ಸಂಸ್ಕೃತ ಬಿ.ಎ. ಹಾಗೂ ಸಂಸ್ಕೃತ ಎಂ.ಎ. ತರಗತಿಗಳ ಪರಿಷ್ಕೃತ ಪಾಠ್ಯಕ್ರಮಕ್ಕೆ ಸಭೆಯಲ್ಲಿ ಅನುಮೋದನೆಯನ್ನು ಕೋರಲಾಗಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಬಿ.ಎ. ಮತ್ತು ಎಂ.ಎ. ತರಗತಿಗಳ ಪರಿಷ್ಕೃತ ಪಾಠ್ಯಕ್ರಮಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.** |

| | | |
|---|---|---|
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ವೇದಾಂತ ಪರಿಷ್ಕೃತ ಪಾಠ್ಯಕ್ರಮವನ್ನು ಅನುಮೋದಿಸುವ ಬಗೆಗೆ.**<br>ದಿನಾಂಕ: 19.06.2017ರಂದು ಅದ್ವೈತ ವೇದಾಂತ ತರಗತಿಗಳ ಅಧ್ಯಯನ ಮಂಡಳಿಗಳ ಸಭೆಯು ನಡೆಯಿತು. ಅಂದು ಅದ್ವೈತ ವೇದಾಂತ ಪಾಠ್ಯಕ್ರಮದಲ್ಲಿ ಪರಿಷ್ಕರಣೆಯನ್ನು ಮಾಡಲಾಯಿತು. ದಿನಾಂಕ: 16.06.2017ರಂದು ವಿಶಿಷ್ಟಾದ್ವೈತ ವೇದಾಂತ ಹಾಗೂ ದ್ವೈತವೇದಾಂತ ಮತ್ತು ದಿನಾಂಕ: 29.06.2017ರಂದು ಶಕ್ತಿವಿಶಿಷ್ಟಾದ್ವೈತ ವೇದಾಂತ ವಿಷಯಗಳಲ್ಲಿ ಅಧ್ಯಯನ ಮಂಡಳಿಗಳ ಸಭೆಗಳು ನಡೆದವು. ಪರಿಷ್ಕೃತ ಪಾಠ್ಯಕ್ರಮವನ್ನು ಲಗತ್ತಿಸಲಾಗಿದೆ. ವೇದಾಂತದ ಪರಿಷ್ಕೃತ ಪಾಠ್ಯಕ್ರಮಕ್ಕೆ ಸಭೆಯಲ್ಲಿ ಅನುಮೋದನೆಯನ್ನು ಕೋರಲಾಗಿದೆ. |
| | ನಿರ್ಣಯ | **ಸಭೆಯು ಪರಿಷ್ಕೃತ ವೇದಾಂತ ಪಾಠ್ಯಕ್ರಮಕ್ಕೆ ಅನುಮೋದನೆಯನ್ನು ನೀಡಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಮೈಸೂರಿನಲ್ಲಿ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ' ಆರಂಭಿಸುವ ಹಾಗೂ ಸಿಬ್ಬಂದಿ ನಿಯೋಜನೆಯ ಬಗೆಗೆ.**<br>ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಆವರಣದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾಗಿ 'ಸಂಶೋಧನಾ ಕೇಂದ್ರ'ವೊಂದನ್ನು ಆರಂಭಿಸಲು ಉದ್ದೇಶಿಸಲಾಗಿದ್ದು, ಇದಕ್ಕೆ ಅಗತ್ಯವಾದ ಕಟ್ಟಡದ ನಿರ್ಮಾಣಕಾರ್ಯ ಈಗಾಗಲೇ ಪ್ರಗತಿಯಲ್ಲಿದೆ. ಈ ಸಂಸ್ಥೆಯು ಕಾರ್ಯಾರಂಭ ಮಾಡಲು ವಿಶ್ವವಿದ್ಯಾಲಯದ ವೇದಾಂತ ನಿಕಾಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಶರತ್ ಚಂದ್ರ ಸ್ವಾಮಿ ಇವರನ್ನು ಪ್ರಭಾರ ನಿರ್ದೇಶಕರಾಗಿ ಮತ್ತು ಕಟ್ಟಡ ನಿರ್ಮಾಣದ ಮೇಲುಸ್ತುವಾರಿ ಜವಾಬ್ದಾರಿಯನ್ನು ವಹಿಸಲು ಹಾಗೂ ಮಹಾರಾಜ ಕಾಲೇಜಿನ ಶಕ್ತಿವಿಶಿಷ್ಟಾದ್ವೈತ ವಿಭಾಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುವುದರಿಂದ ಮತ್ತು ಅಧ್ಯಾಪಕರ ಸಂಖ್ಯೆ ಕಡಿಮೆ ಇರುವುದರಿಂದ, ಆ ವಿಭಾಗದಲ್ಲಿ ಅಧ್ಯಾಪನವನ್ನು ಕೈಗೊಳ್ಳಲು ಸೂಚಿಸಿ ಅವರನ್ನು ನಿಯೋಜಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಯನ್ನು ಕೋರಿದೆ. |
| | ನಿರ್ಣಯ | **ಸಭೆಯು ವಿವರಗಳನ್ನು ಪರಿಶೀಲಿಸಿ, ವೇದಾಂತ ನಿಕಾಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಶರತ್ ಚಂದ್ರ ಸ್ವಾಮಿ ಅವರನ್ನು ನಿಯೋಜನೆ ಮಾಡಲು ಒಪ್ಪಿಗೆಯನ್ನು ನೀಡಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಸಿಬ್ಬಂದಿಗಳು ವಿಶ್ವವಿದ್ಯಾಲಯ ಹಾಗೂ ನಿರ್ದೇಶನಾಲಯದ ಪರೀಕ್ಷೆಗಳನ್ನು ಬರೆಯುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ.–ಶಾಸ್ತ್ರಿ ಮತ್ತು ಎಂ.ಎ.–ಆಚಾರ್ಯ ಪರೀಕ್ಷೆಗಳನ್ನು ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸುವ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಪ್ರಸಿದ್ಧ ಪರೀಕ್ಷೆಗಳನ್ನು ಖಾಸಗಿಯಾಗಿ ಬರೆಯಲು ಅವಕಾಶವಿದ್ದು, ವಿಶ್ವವಿದ್ಯಾಲಯದ ಕೆಲವು ಸಿಬ್ಬಂದಿಗಳೂ ಕೂಡ ಖಾಸಗಿಯಾಗಿ ಈ ಪರೀಕ್ಷೆಗಳನ್ನು ಬರೆಯುತ್ತಿದ್ದಾರೆ. ಈ ಪರೀಕ್ಷೆಗಳ ಪ್ರಶ್ನೆಪತ್ರಿಕೆ–ಉತ್ತರಪತ್ರಿಕೆಗಳ ಸಿದ್ಧತೆ, ಇತ್ಯಾದಿ ಪರೀಕ್ಷಾ ಕಾರ್ಯಗಳು ವಿಶ್ವವಿದ್ಯಾಲಯದಲ್ಲೇ ನಡೆಯುವುದರಿಂದ, ಈ ಪರೀಕ್ಷೆಗಳಲ್ಲಿ ಗೌಪ್ಯತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಪರೀಕ್ಷೆಗಳನ್ನು ಬರೆಯುವುದು ಸಮಂಜಸವಾದುದಲ್ಲ ಎಂದು ಭಾವಿಸಲಾಗಿದೆ. ಸಿಬ್ಬಂದಿಗಳು ವಿಶ್ವವಿದ್ಯಾಲಯದ ಪೂರ್ವಾನುಮತಿಯನ್ನು ಪಡೆದು ರಾಜ್ಯದ ಇತರೆ ವಿಶ್ವವಿದ್ಯಾಲಯಗಳ ದೂರಶಿಕ್ಷಣ (Correspondence) ಕೋರ್ಸ್‌ಗಳನ್ನು ಮಾಡಲು ಅವಕಾಶ ನೀಡಬಹುದಾಗಿದೆ. ಆದುದರಿಂದ ಮುಂದಿನ ನಿರ್ಣಯಕ್ಕಾಗಿ ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ ಸಭೆಯ ಮುಂದೆ ಮಂಡಿಸಿದೆ. |
| | ನಿರ್ಣಯ | **ಸಭೆಯು ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿತು. ವಿಶ್ವವಿದ್ಯಾಲಯದ ನೌಕರರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷೆಗಳನ್ನು ಬರೆಯಲು ಇರುವ ಅವಕಾಶವನ್ನು ರದ್ದುಪಡಿಸಲು ಹಾಗೂ ವಿಶ್ವವಿದ್ಯಾಲಯದ ಪೂರ್ವಾನುಮತಿಯೊಂದಿಗೆ ರಾಜ್ಯದ ಇತರ ವಿಶ್ವವಿದ್ಯಾಲಯಗಳ ದೂರಶಿಕ್ಷಣ ಕೋರ್ಸ್‌ಗಳ ಅಧ್ಯಯನ ಮಾಡುವುದಕ್ಕೆ ಅವಕಾಶವನ್ನು ನೀಡಲು ಅನುಮೋದನೆಯನ್ನು ನೀಡಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ನೇರ ನೇಮಕಾತಿ ಮತ್ತು CAS (Career Advancement Scheme) ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮತಿ ನೀಡುವ ಬಗೆಗೆ.**<br>ಉನ್ನತ ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳ ಅಧ್ಯಾಪಕರು ಮತ್ತು ಇನ್ನಿತರ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿಗೆ ನಿಗದಿಪಡಿಸಲಾಗಿದ್ದ ಕನಿಷ್ಟ ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ವು ತಿದ್ದುಪಡಿಗಳನ್ನು ಮಾಡಿ ಅಧಿಸೂಚನೆ ಸಂಖ್ಯೆ: F1-2/2016 (PS)/Amendment, dated: 11.07.2016ರ ಅನ್ವಯ ಅಧಿಸೂಚನೆಯನ್ನು ಹೊರಡಿಸಿದೆ. ಈ ಅಧಿಸೂಚನೆಯಂತೆ, ಯುಜಿಸಿ ಮಾಡಿರುವ ತಿದ್ದುಪಡಿಗಳನ್ನು |

| | | |
|---|---|---|
| | | ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳೂ ಅಳವಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 05.05.2017ರಂದು ನಡೆದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 18ನೇ ಸಾಮಾನ್ಯ ಸಭೆಯು ಚರ್ಚಿಸಿ, "ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಯುಜಿಸಿ 2010 ಮತ್ತು 2016ರ ತಿದ್ದುಪಡಿ ರೆಗ್ಯುಲೇಷನ್ಸ್‌ಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರನ್ವಯ ಕರಡು ಅನುಶಾಸನಗಳನ್ನು ರಚಿಸುವುದರ ಮೂಲಕ ಸರ್ಕಾರಕ್ಕೆ ಸಲ್ಲಿಸಿ ಕುಲಾಧಿಪತಿಗಳ ಅನುಮೋದನೆ ಪಡೆಯಬೇಕೆಂದು" ನಿರ್ಣಯಿಸಿರುತ್ತದೆ.<br>ಈ ಹಿನ್ನೆಲೆಯಲ್ಲಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧ್ಯಾಪಕರು ಹಾಗೂ ಇನ್ನಿತರ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿ ಪರಿನಿಯಮಕ್ಕೆ ತಿದ್ದುಪಡಿಗಳನ್ನು ಮಾಡಲು ಹಾಗೂ ವಿಶ್ವವಿದ್ಯಾಲಯದ ಇನ್ನಿತರ ವಿಷಯಗಳಿಗೆ ಸಂಬಂಧಪಟ್ಟ ಪರಿನಿಯಮಗಳನ್ನು ಸಿದ್ಧಪಡಿಸಲು ಕುಲಪತಿಗಳು 'ಪರಿನಿಯಮ ರಚನಾ ಸಮಿತಿ'ಯನ್ನು ನೇಮಿಸಿರುತ್ತಾರೆ. ಸದರಿ ಸಮಿತಿಯು ದಿನಾಂಕ: 01.08.2017ರಂದು ಸಭೆ ಸೇರಿ, ಚರ್ಚಿಸಿ, ಪರಿನಿಯಮವನ್ನು ರಚಿಸಿರುತ್ತಾರೆ. ಸದರಿ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಿ, ಕುಲಾಧಿಪತಿಗಳ ಅನುಮೋದನೆಯನ್ನು ಪಡೆಯಲು ಸಭೆಯ ಅನುಮತಿಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ನೇರ ನೇಮಕಾತಿ ಮತ್ತು CAS (Career Advancement Scheme) ಪರಿನಿಯಮವನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು ಹಾಗೂ ಈ ಪರಿನಿಯಮವನ್ನು ನಿಯಮಾನುಸಾರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆಯನ್ನು ಪಡೆಯಲು ಸೂಚಿಸಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಪ್ರಥಮಾ, ಕಾವ್ಯ ಪ್ರಮಾಣಪತ್ರಗಳಲ್ಲಿನ ಭಾಷಾ ಪರಿಪಾಠಿಯನ್ನು ಬದಲಾಯಿಸುವ ಬಗೆಗೆ.**<br>ಪ್ರಥಮಾ, ಕಾವ್ಯ ಪ್ರಮಾಣಪತ್ರಗಳನ್ನು ಇದುವರೆವಿಗೂ ಕನ್ನಡ ಭಾಷೆಯಲ್ಲಿ ನೀಡಲಾಗುತ್ತಿರುತ್ತದೆ. ಆದರೆ ಕೆಲ ಹೊರ ರಾಜ್ಯದಲ್ಲಿರುವ ವಿದ್ಯಾರ್ಥಿಗಳು ತಮಗೆ ಅನುಕೂಲಕರವಾಗುವಂತೆ ಸಂಸ್ಕೃತ ಅಥವಾ ಆಂಗ್ಲ ಮಾಧ್ಯಮದಲ್ಲಿ ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ. ಹಾಗಾಗಿ, ಇನ್ನುಮುಂದೆ ಪ್ರಥಮಾ, ಕಾವ್ಯ ಅಂಕಪತ್ರಗಳನ್ನು ಸಂಸ್ಕೃತ/ ಆಂಗ್ಲ ಮಾಧ್ಯಮದಲ್ಲಿ ನೀಡಬಹುದೇ ಅಥವಾ ಇದುವರೆವಿಗೂ ನಡೆದುಬಂದ ಪರಿಪಾಠಿಯಂತೆ ಕನ್ನಡದಲ್ಲೇ ನೀಡಬೇಕೆ? ಎಂಬ ಸೂಕ್ತ ನಿರ್ಣಯಕ್ಕಾಗಿ ಪ್ರಶಿಕ್ಷಣ ಪರಿಷತ್ ಸಭೆಗೆ ಮಂಡಿಸಿದೆ. |
| | ನಿರ್ಣಯ | **ಸಭೆಯು ಎಲ್ಲ ಅಂಶಗಳ ಬಗೆಗೆ ಚರ್ಚಿಸಿತು. ಹೊರರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ, ಪ್ರಥಮಾ ಮತ್ತು ಕಾವ್ಯ ತರಗತಿಗಳ ಅಂಕಪತ್ರಗಳನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ನೀಡಲು ನಿರ್ಣಯಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಜ್ಯೋತಿಷ್ಯ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಸಂಸ್ಥೆಗಳಿಗೆ ಹೊಸದಾಗಿ ಮಾನ್ಯತೆ ನೀಡಿರುವ ಬಗೆಗೆ.**<br>ಮಾನ್ಯ ಜ್ಯೋತಿಷ್ಯ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಕೆಲವು ಸಂಸ್ಥೆಗಳಿಗೆ 2016–17ನೇ ಸಾಲಿನಿಂದ ಹೊಸದಾಗಿ ಮಾನ್ಯತೆಯನ್ನು ನೀಡಲಾಗಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಾನ್ಯತೆ ನೀಡಿರುವ ಜ್ಯೋತಿಷ್ಯ ಸಂಸ್ಥೆಗಳ ಪಟ್ಟಿಯನ್ನು ಮಂಡಿಸಿದೆ. |
| | ನಿರ್ಣಯ | **ಜ್ಯೋತಿಷ್ಯ ಸಂಸ್ಥೆಗಳಿಗೆ ಹೊಸದಾಗಿ ಮಾನ್ಯತೆಯನ್ನು ನೀಡಿರುವುದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ 'ಅನುಮೋದಿತ ಶೋಧಪತ್ರಿಕೆಗಳ ಪಟ್ಟಿ'ಗೆ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿಕಾಯಾಧ್ಯಕ್ಷರ ಸಮಿತಿಯು ಕೆಲವು ಶೋಧಪತ್ರಿಕೆಗಳನ್ನು ಉತ್ತಮ ಗುಣಸ್ತರದ ಶೋಧಪತ್ರಿಕೆಗಳೆಂದು ಮತ್ತು ಇವುಗಳಲ್ಲಿ ಪ್ರಕಟವಾದ ಸಂಶೋಧನ ಲೇಖನಗಳನ್ನು **(Research Papers)** ಅರ್ಹತೆಯ ಮಾನದಂಡವಾಗಿ ಪರಿಗಣಿಸಬಹುದೆಂದು ತೀರ್ಮಾನಿಸಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. ಪಟ್ಟಿಯನ್ನು ಲಗತ್ತಿಸಿದೆ. |
| | ನಿರ್ಣಯ | **ಸಭೆಯು ಶೋಧಪತ್ರಿಕೆಗಳ ಪಟ್ಟಿಯನ್ನು ಪರಿಶೀಲಿಸಿ, ಈ ಶೋಧಪತ್ರಿಕೆಗಳನ್ನು ಅರ್ಹತೆಯ ಮಾನದಂಡವಾಗಿ ಪರಿಗಣಿಸಲು ಅನುಮೋದನೆಯನ್ನು ನೀಡಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಜ್ಯೋತಿಷ್ಯ/ವಾಸ್ತು ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಅಡ್ವಾನ್ಸ್ಡ್ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಾತಿಗೆ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಜ್ಯೋತಿಷ್ಯ ಸಂಸ್ಥೆಗಳು ನಡೆಸುತ್ತಿರುವ ಜ್ಯೋತಿಷ್ಯ/ವಾಸ್ತು ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಅಡ್ವಾನ್ಸ್ಡ್ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಾತಿಗೆ 2014–15ನೇ ಸಾಲಿನಿಂದ ಈವರೆಗೆ ವಿದ್ಯಾರ್ಹತೆಯಲ್ಲಿ ವಿನಾಯಿತಿಯನ್ನು ನೀಡಲಾಗಿತ್ತು. 2017–18ನೇ ಸಾಲಿನಿಂದ ಈ ವಿನಾಯಿತಿಯನ್ನು ರದ್ದುಗೊಳಿಸಿದ್ದು, ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡ |

| | | |
|---|---|---|
| | | ಪರಿನಿಯಮದಂತೆ ಪ್ರವೇಶಾತಿ ನಿಯಮಗಳನ್ನು ಇನ್ನುಮುಂದೆ ಅನುಸರಿಸಲಾಗುವುದು. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಮಾನ್ಯ ಕುಲಾಧಿಪತಿಗಳು ಅನುಮೋದಿಸಿರುವ ಪರಿನಿಯಮದಂತೆ ಪ್ರವೇಶಾತಿ ನಿಯಮಗಳನ್ನು ಪಾಲಿಸಲು ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 03 | **ವಿಷಯ ಮತ್ತು ಟಿಪ್ಪಣಿ** | **ವೇದ ಶಾಸ್ತ್ರಿ/ಆಚಾರ್ಯ ಪದವಿಗಳ ಪ್ರವೇಶಾರ್ಹತೆ ಬಗೆಗೆ.**<br>ಯಾವುದೇ ವಿದ್ಯಾರ್ಥಿಯು ವೇದವಿಭಾಗದಲ್ಲಿ 'ವೇದಮೂಲ'ವನ್ನು ಅಧ್ಯಯನ ಮಾಡಿದ್ದು, 'ಸಮಗ್ರ ವೇದಮೂಲ ಅಧ್ಯಯನ ಮಾಡಿದ್ದಾರೆ' ಎಂದು ವೇದವಿದ್ವಾಂಸರ ಶಿಫಾರಸ್ಸು ಪತ್ರವನ್ನು ತಂದರೆ ಅಂತಹ ವಿದ್ಯಾರ್ಥಿಯನ್ನು ಅಂತಹ ವಿದ್ಯಾರ್ಹತೆಯನ್ನು ಪಿ.ಯು.ಸಿ.ಗೆ ಸಮಾನಾಂತರವೆಂದು ಪರಿಗಣಿಸಿ 'ವೇದ ಬಿ.ಎ.–ಶಾಸ್ತ್ರಿ' ತರಗತಿಗಳಿಗೆ ಪ್ರವೇಶ ನೀಡಬಹುದಾಗಿರುತ್ತದೆ. ಅಂತೆಯೇ, ಯಾರಾದರೂ ಅತ್ಯುತ್ತಮ ವಿದ್ವಾಂಸರು ವಿಶ್ವವಿದ್ಯಾಲಯದ ವೇದ (ಘನಾಂತ) ಎಂ.ಎ.–ಆಚಾರ್ಯ ಪದವಿಗೆ ಪ್ರವೇಶ ಬಯಸಿದರೆ, ಅಂತಹ ವಿದ್ವಾಂಸರನ್ನು ವಿಶ್ವವಿದ್ಯಾಲಯವು ನೇಮಿಸುವ ವಿದ್ವಾಂಸರ ಸಮಿತಿಯು ಪರೀಕ್ಷೆ ನಡೆಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಅವರಿಗೆ ವೇದ ಎಂ.ಎ.–ಆಚಾರ್ಯ ಪದವಿಗೆ ಪ್ರವೇಶ ನೀಡಬಹುದಾಗಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ತಾತ್ವಿಕವಾಗಿ ಒಪ್ಪಿಗೆಯನ್ನು ನೀಡಿತು. ಆದರೆ, ಎಂ.ಎ. ಪದವಿಗೆ ಪ್ರವೇಶ ಪಡೆಯುವ ಮುನ್ನ ವಿಸ್ತೃತವಾಗಿ ಮತ್ತೊಮ್ಮೆ ಚರ್ಚಿಸುವ ಅಗತ್ಯವಿದೆ ಎಂದು ಸಭೆಯು ಭಾವಿಸಿತು.** |
| ವಿಷಯ 04 | **ವಿಷಯ ಮತ್ತು ಟಿಪ್ಪಣಿ** | **ವಿಶ್ವವಿದ್ಯಾಲಯದಲ್ಲಿ 'ಕನ್ನಡ ಸಮಿತಿ'ಯನ್ನು ರಚಿಸುವ ಬಗೆಗೆ.**<br>ಕರ್ನಾಟಕ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯನ್ನು ಕರೆದು, ಆಡಳಿತದಲ್ಲಿ ಮತ್ತು ಪಾಠ್ಯಕ್ರಮದಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೆಲವು ಸಲಹೆ–ಸೂಚನೆಗಳನ್ನು ನೀಡಿರುತ್ತಾರೆ. ಅದರಂತೆ, ವಿಶ್ವವಿದ್ಯಾಲಯದಲ್ಲಿ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಕನ್ನಡದ ಅಭಿವೃದ್ಧಿ ಹಾಗೂ ಪರಿಪೋಷಣೆಗಾಗಿ 'ಕನ್ನಡ ಸಮಿತಿ'ಗಳನ್ನು ರಚಿಸಿ, ಅದಕ್ಕೆ ಸಂಯೋಜಕರನ್ನು ನೇಮಿಸಬೇಕಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು 'ಕನ್ನಡ ಸಮಿತಿ'ಗಳನ್ನು ರಚಿಸಿ, ಅದಕ್ಕೆ ಸಂಯೋಜಕರನ್ನು ನೇಮಿಸಲು ಒಪ್ಪಿಗೆಯನ್ನು ನೀಡಿತು ಹಾಗೂ ಈ ಬಗ್ಗೆ ಸಂಯೋಜಿತ ಎಲ್ಲಾ ಕಾಲೇಜುಗಳಿಗೆ ಆದೇಶವನ್ನು ಹೊರಡಿಸಲು ಸೂಚಿಸಿತು.** |

**ಶ್ರೀಮತಿ ಎಂ. ಶಿಲ್ಪ, ಕ.ಆ.ಸೇ.**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು